ಮೂಲ ದಾವಾ ಸಂಖ್ಯೆ 19/2016

ಪಿ ಡಬ್ಲ್ಯೂ-3

**(ದಿನಾಂಕ 09.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ ಕೆ ಎಂ ವಕೀಲರಿಂದಃ-**

ವಾದಿ ದಾವಾದ ಆಸ್ತಿಯನ್ನು ಸ್ವಾಧೀನದಲ್ಲಿ ಇದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 539/ಬಿ/1ಬಿ 10 ಸೆಂಟ್ಸ್ 25-26 ವರ್ಷಗಳ ಹಿಂದೆ ಬೇಲ್ದಾರ ಲಕ್ಷ್ಮಯ್ಯ ರವರಿಂದ ವಾದಿ ಗಂಡ ಖರೀದಿ ಮಾಡಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಸರ್ವೆ ನಂಬರ 539/ಬಿ/1ಬಿ 10 ಸೆಂಟ್ಸ್ ಅಸ್ತಿತ್ವದಲ್ಲಿ ಇಲ್ಲಾ ಅಂತಾ ಸೂಚಿಸುವುದು ಸರಿಯಲ್ಲ. ವಾದಿ ಮನೆಯನ್ನು ತಹಶೀಲ್ದಾರ ಡಿಸಿ, ಎ ಸಿ, ಚೀಫ್ ಆಫೀಸರ್ ಎಲ್ಲರೂ ಕೆಡವಿದ್ದು ಸದರಿ ವಿಷಯವನ್ನು ವಾದಿಯೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವರದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹುಬ್ಬಳ್ಳಿಯ ಪೀಠದಿಂದ ಸ್ಟೇ ತಂದಿರುತ್ತಾರೆ. ಸದರಿ ಸ್ಟೇ ಪ್ರತಿಯನ್ನು ನೋಡಿರುತ್ತೇನೆ. ಹುಬ್ಬಳ್ಳಿಯ ಪೀಠದಿಂದ ಸ್ಟೇ ತಂದಿರುತ್ತಾರೆ ಎಂಬ ವಿಷಯ ನನಗೆ ಹೇಗೆ ಗೊತ್ತಾಯಿತು ಎಂದರೆ ನಾನು ದಾವಾ ಆಸ್ತಿ ಎದುರಿಗೆ ಇದ್ದೇನೆ. ಹುಬ್ಬಳ್ಳಿಯ ಪೀಠದಿಂದ ಸ್ಟೇ ಆದೇಶ ನೋಡಿದ್ದೇನೆ. ಹುಬ್ಬಳ್ಳಿಯ ಪೀಠದಿಂದ ಸ್ಟೇ ಆದೇಶ ಆಗಿಲ್ಲಾ ಎಂದರೆ ಸರಿಯಲ್ಲ. ಹುಬ್ಬಳ್ಳಿಯ ಪೀಠದಿಂದ ಸ್ಟೇ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮೀನಾಬೀ ಹುಬ್ಬಳ್ಳಿಯ ಪೀಠದಿಂದ ಸ್ಟೇ ಆದೇಶ ಆಗಿದೆ ಅಂತಾ ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನನಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ಸೃಷ್ಟಿ ಮಾಡಿ ಸದರಿ ವಾದಿಯ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1962 ರಲ್ಲಿ ಕಾಳಮ್ಮ ದೇವಸ್ಥಾನಕ್ಕೆ ಪಟ್ಟಾ ಕೊಟ್ಟಿರುತ್ತಾರೆ ಎಂದರೆ ಅದು ಬೇರೆ ಸರ್ವೆ ನಂಬರ. 186 ಎಕರೆ 6 ಸೆಂಟ್ಸ್ ಕೆರೆ ಪರಂಪೋಕ್

ಆಸ್ತಿ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ 539/ಬಿ 186 ಎಕರೆ 6 ಸೆಂಟ್ಸ್ ಪರಂಪೋಕ ಜಮೀನು ಇದೆ ಎಂದರೆ ಅದು ಬೇರೆ ಸರ್ವೆ ನಂಬರ. ಬೇಲ್ದಾರ ಲಕ್ಷ್ಮಯ್ಯ ಮಾರಾಟರ ಮಾಡಿದ ಅಂತಾ ಹೇಳುವ ಆಸ್ತಿ ಕಾಳಮ್ಮ ದೇವಸ್ಥಾನಕ್ಕೆ ಪಟ್ಟ ಕೊಟ್ಟ ಜಮೀನಿನಲ್ಲಿ ಬರುತ್ತದೆ ಎಂದರೆ ಅದು ಬೇರೆ ಆಸ್ತಿ. ಸರ್ವೆ ನಂಬರ 539/ಬಿ ಮೂಲತಃ ಟ್ಯಾಂಕ್ ಪರಂಪೋಕ್ ಜಮೀನು ಇದ್ದು ಅದನ್ನು ಆಂಜನೆಯ ದೇವಸ್ಥಾನ, ಕೋಟೆ ಕಾಳಮ್ಮ ದೇವಸ್ಥಾನ ಮತ್ತು ಬಸ್ತಿ ದೇವಸ್ಥಾನ ನಿರ್ಮಾಣ ಆಗಿರುವ ಕಾರಣ ದಿನಾಂಕ 12.06.1962 ರಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ಟ್ಯಾಂಕ್ ಪರಂಪೋಕ್ ಜಮೀನಿನ ಪೈಕಿ 15 ಎಕರೆ 41 ಸೆಂಟ್ಸನ್ನು ಕೋಟೆ ಆಂಜನೇಯ, ಕಾಳಮ್ಮ ದೇವಸ್ಥಾನ ಮತ್ತು ಬಸ್ತಿ ದೇವಸ್ಥಾನಕ್ಕೆ ಮಂಜೂರು ಮಾಡಿರುತ್ತಾರೆ ಎಂದರೆ ಅದು ಬೇರೆ ಸರ್ವೆ ನಂಬರ. ಆಂಜನೆಯ ಸ್ವಾಮಿ ದೇವಸ್ಥಾನಕ್ಕೆ ಒಟ್ಟು 6 ಎಕರೆ 4 ಸೆಂಟ್ಸ್ ಮಂಜೂರಾಗಿದ್ದು ಅವು ಸರ್ವೆ ನಂಬರ 736 ವಿಸ್ತೀರ್ಣ 1 ಎಕರೆ 30 ಸೆಂಟ್ಸ್, ಸರ್ವೆ ನಂಬರ 737/1 ವಿಸ್ತೀರ್ಣ 1 ಎಕರೆ 33 ಸೆಂಟ್ಸ್, ಸರ್ವೆ ನಂಬರ 737/2 ವಿಸ್ತೀರ್ಣ 0 ಎಕರೆ 40 ಸೆಂಟ್ಸ್, ಸರ್ವೆ ನಂಬರ 741/1 ವಿಸ್ತೀರ್ಣ 0 ಎಕರೆ 29 ಸೆಂಟ್ಸ್, ಸರ್ವೆ ನಂಬರ 741/2 ವಿಸ್ತೀರ್ಣ 0 ಎಕರೆ 62 ಸೆಂಟ್ಸ್, ಸರ್ವೆ ನಂಬರ 742 ವಿಸ್ತೀರ್ಣ 0 ಎಕರೆ 58 ಸೆಂಟ್ಸ್, ಸರ್ವೆ ನಂಬರ 743 ವಿಶಿ 0 ಎಕರೆ 82 ಸೆಂಟ್ಸ್, ಸರ್ವೆ ನಂಬರ 744 ವಿಸ್ತೀರ್ಣ 0 ಎಕರೆ 70 ಸೆಂಟ್ಸ್ ಎಂದರೆ ಅದು ಬೇರೆ ಸರ್ವೆ ನಂಬರ. ಸರ್ವೆ ನಂಬರ 539/ಬಿ 1 ಬೇಲ್ದಾರ ಲಕ್ಷ್ಮಯ್ಯನಿಗೆ 1.42 ಸೆಂಟ್ಸ್ ಮಂಜೂರು ಅಗಿತ್ತು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10.11.2022 ರಂದು ಅಸಿಸ್ಟೆಂಟ್ ಕಮೀಶನರ್ ರವರು ಬೇಲ್ದಾರ ಲಕ್ಷ್ಮಯ್ಯ ನವರಿಗೆ ನೀಡಿದ್ದ ದರಖಾಸ್ತ ಮಂಜರು ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಆಸ್ತಿ ವಾದಿಯ ಗುಜರಿ ಅಂಗಡಿ ಇರುವುದಿಲ್ಲಾ, ಮನೆ ಇರುವುದಿಲ್ಲಾ ಎಂದರೆ ಸರಿಯಲ್ಲ. ವಾದಿ ನಮ್ಮ ಕುಲಸ್ಥರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಬಿ ಹೆಚ್ ವಕೀಲರಿಂದಃ-**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲಾ. ದಾವಾವನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಅಂತಾ ನನಗೆ ಗೊತ್ತಿದೆ. ಯಾರು ಯಾರ ವಿರದ್ಧ ಪ್ರಕರಣ ಹೂಡಿರುತ್ತಾರೆ ನನಗೆ ನೆನಪಿಲ್ಲಾ. ಯಾವ ಆಸ್ತಿಗೆ ಸಂಬಂಧಿಸಿದಂತೆ ದಾವಾ ಇದೆ ಅಂತಾ ಗೊತ್ತು. ದಾವಾ ಆಸ್ತಿ ನಂಬರ 539 1 ಎಕರೆ 42 ಸೆಂಟ್ಸ್ ಬೇಲ್ದಾರ ಲಕ್ಷ್ಮಯ್ಯನ ಹೆಸರಿನಲ್ಲಿ ಇದೆ. ಕಲೀಮುಲ್ಲಾ ನನಗೆ ಗೆಳೆಯ ಕುಲಸ್ಥ ಆಗಬೇಕು. ಓ ಎಸ್ ನಂಬರ 20/2016 ರಲ್ಲಿ ನಾನು ನಿನ್ನೆ ಸಾಕ್ಷಿ ನುಡಿದಿರುತ್ತೇ ಎಂದರೆ ಸರಿ. ನಾನು ಪ್ರತಿದಿನ ಬೇರೆ ಬೇರೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 539 ಮೂಲ ಬೇಲ್ದಾರ ಲಕ್ಷ್ಮಯ್ಯನ ಆಸ್ತಿ. ತಹಶೀಲ್ದಾರ ಪಟ್ಟಾ ನೀಡಿದ ಆಧಾರ ಮೇಲೆ ಬೇಲ್ದಾರ ಲಕ್ಷ್ಮಯ್ಯನಿಗೆ ಆಸ್ತಿ ಬಂದಿರುತ್ತದೆ. ನನ್ನ ತಂದೆ ಮತ್ತು ಬೇಲ್ದಾರ ಲಕ್ಷ್ಮಯ್ಯ ಸ್ನೇಹಿತರಾಗಿದ್ದು ವಿಷಯಗೊತ್ತಿದೆ. ಹರಪನಹಳ್ಳಿ ತಾಲೂಕು ಕಚೇರಿ ರಿಜಿಸ್ಟ್ರರ ಕಚೇರಿ ಇದೆ. ಬಳ್ಳಾರಿ ಜಿಲ್ಲೆ ಇದ್ದಾಗ ನೀಡಿರುತ್ತಾರೆ. ಸರ್ವೆ ನಂಬರ ಆಸ್ತಿಯಲ್ಲಿ ಈಗ 6 ಎಕರೆ 4 ಸೆಂಟ್ಸ್ ಕೋಟೆ ಆಂಜನೆಯ ದೇವಸ್ಥಾನ ನಿರ್ಮಾಣ ಆಗಿದೆ ಎಂದರೆ ಅದು ಬೇರೆ ಸರ್ವೆ ನಂಬರ . ಸರ್ವೆ ನಂಬರ 736 1 ಎಕರೆ 30 ಸೆಂಟ್ಸ್ ಸರ್ವೆ ನಂಬರ 737/1 1 ಎಕರೆ 33 ಸೆಂಟ್ಸ್, ಸರ್ವೆ ನಂಬರ 737/2 40 ಸೆಂಟ್ಸ್ ಸರ್ವೆ ನಂಬರ 741/1 27 ಸೆಂಟ್ಸ್ ಸರ್ವೆ ನಂಬರ 742 58 ಸೆಂಟ್ಸ್ ಸರ್ವೆ ನಂಬರ 743 82 ಸೆಂಟ್ಸ್ ಸರ್ವೆ ನಂಬರ 744, 70

ಸೆಂಟ್ಸ್ ಕೋಟೆ ಆಂಜನೆಯ ದೇವಸ್ಥಾನಕ್ಕೆ ಇದೆ ಎಂದರೆ ಅದು ಬೇರೆ ಸರ್ವೆ ನಂಬರ. ಸರ್ವೆ ನಂಬರ 539/ಬಿ/1ಬಿ 10 ಸೆಂಟ್ಸ್ ನಲ್ಲಿ ವಾದಿ ಗುಜರಿ ಅಂಗಡಿ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲೀಮುಲ್ಲಾ ಸಾಕ್ಷಿನುಡಿಯಲು ಕರೆದುಕೊಂಡು ಬಂದಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದ ಆಸ್ತಿ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.